# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 215 (264) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 06-12-2023 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳ ಕುರಿತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲಾಗುತ್ತಿದೆಯೇ; ಸದರಿ ಮನವಿಗಳಲ್ಲಿರುವ ಅಂಶಗಳನ್ನು ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ, ಸರ್ಕಾರ ಈ ಕುರಿತು ಸ್ಪಂದಿಸಿದೆಯೇ; (ಇತ್ತೀಚೀನ 03 ವರ್ಷಗಳ ಜಿಲ್ಲಾವಾರು ವಿವರ ನೀಡುವುದು) | ಹೌದು, ಎಲ್ಲಾ ಮನವಿಗಳಲ್ಲಿರುವ ಅಂಶಗಳನ್ನು ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕ್ರಮವಹಿಸಲಾಗುತ್ತಿದೆ.<br><br>**ಇತ್ತೀಚೀನ 03 ವರ್ಷಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.** |
| ಆ | ನಿರ್ಧಿಷ್ಟವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳಲ್ಲಿ ಕೆಲವು ಸ್ಥಾನಿಕ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ಪಟ್ಟಿ ಮಾಡಿ ಪರಿಹರಿಸಲು ಕ್ರಮವಹಿಸಿದೆಯೇ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಅದಾಲತ್, ಜನತಾ ದರ್ಶನ ಕಾರ್ಯಕ್ರಮಗಳು ನಡೆಯುತ್ತಿದ್ದು, ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ **ಹಾಗೂ** ಉಡುಪಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳ ಬಗ್ಗೆ ಜನತಾ ದರ್ಶನ ಕಾರ್ಯಕ್ರಮಗಳಲ್ಲಿ ಮನವಿಗಳನ್ನು ಸ್ವೀಕರಿಸಿ ಸದರಿ ಮನವಿಗಳನ್ನು ಜಿಲ್ಲಾಧಿಕಾರಿಯವರ, ಸಹಾಯಕ ಆಯುಕ್ತರು ಹಾಗೂ ತಹಶೀಲ್ದಾರ್ ಹಂತದಲ್ಲಿಯೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತಿದೆ. |
| ಇ | ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳಲ್ಲಿ ಭೂಪರಿವರ್ತನೆ ಮಾಡುವಾಗ ಉದ್ಭವಿಸುವ ಸಮಸ್ಯೆಗಳಾದ ಖಾಸಗಿ ಸಂಪರ್ಕ ರಸ್ತೆ, ರಸ್ತೆ ಅಂಚು, ಸೀಆರ್‌ಝಡ್ ಮತ್ತು ವಿವಿಧ ವಲಯಗಳು, ಆರ್‌ಆರ್‌ಟಿಸಿಆರ್ ಹೊಂದಾಣಿಕೆ ಬರದೆ ಇರುವ ಪ್ರಕರಣಗಳು, ಮೂಲ ಕಡತ ಇಲ್ಲ ಎಂದು ಭೂ ಪರಿವರ್ತನೆ ತಿರಸ್ಕರಿಸುವುದು, ಭೂ ಪರಿವರ್ತನೆಯನ್ನು ಪಹಣಿಯಲ್ಲಿ ದಾಖಲಿಸದಿರುವುದು, ದರ್ಖಾಸ್ತು ಪ್ಲಾಟಿಂಗ್ ಆಗದಿರುವುದು, ಜಾಗ ವಿಭಜನೆಯ ಪೋಡಿ ಆಗದಿರುವುದು, ಭೂ ಪರಿವರ್ತನೆಯಲ್ಲಿ ಅಗತ್ಯ ವಿಧಗಳು ಇಲ್ಲದಿರುವುದು, ಮೂಲಗೇಣಿ ಸಮಸ್ಯೆ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸಲು/ | ಹೌದು<br>ಸರ್ಕಾರದ ಆದೇಶ ಸಂ.ಆರ್‌ಡಿ/156/ಎಲ್.ಜಿ.ಪಿ.2020 (ಇ), ದಿನಾಂಕ:21-09-2020 ರಲ್ಲಿನ ಮಾನದಂಡಗಳ ಅನುಸಾರ ಭೂ-ಪರಿವರ್ತನೆಗೆ ಕ್ರಮವಹಿಸಲಾಗುತ್ತಿದೆ ಹಾಗೂ ಭೂ ಪರಿವರ್ತನೆಯನ್ನು ಪಹಣಿಯಲ್ಲಿ ಇಂಡೀಕರಿಸಲಾಗುತ್ತಿದೆ. ಭೂರಿವರ್ತನೆಯಲ್ಲಿ ಪ್ರಮುಖ ವಿಧಗಳು: ವಸತಿ, ವಾಣಿಜ್ಯ ಮತ್ತು ಕೈಗಾರಿಕೆ.<br><br>**ದರಖಾಸ್ತು ಪೋಡಿ(ಪ್ಲಾಟಿಂಗ್) :-**<br>ದರಖಾಸ್ತು ಪೋಡಿ (ಪ್ಲಾಟಿಂಗ್) ಕೋರಿ ಅರ್ಜಿ ಸ್ವೀಕೃತವಾದ, ತಕ್ಷಣವೇ ತಹಶೀಲ್ದಾರರು ಸುತ್ತೋಲೆ **ಸಂ.ತಾಂತ್ರಿಕ. ದರಖಾಸ್ತು.ಪೋಡಿ. ಆಂದೋಲನ. 40/2008 -09 ದಿ:20-10-2008** ರನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ಮಂಜೂರಿ ನೈಜತೆ ಖಾತ್ರಿಪಡಿಸಿಕೊಂಡು ದೃಢೀಕೃತ ಪ್ರತಿ ಯೊಂದಿಗೆ ಪೋಡಿ ದುರಸ್ತಿ ಕುರಿತು ಕಡತವನ್ನು ಭೂಮಾಪನಾ ಶಾಖೆಗೆ ಸಲ್ಲಿಸಲು ಸೂಚನೆ ನೀಡಲಾಗುತ್ತಿದೆ. ಅದರಂತೆ ಸಂಬಂದಿಸಿದ ಅಧಿಕಾರಿಗಳು ನಮೂನೆ 1 ರಿಂದ 5 |

| | | |
|---|---|---|
| | ಪ್ರಕ್ರಿಯೆಗಳನ್ನು ಸರಳೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಅನ್ನು ದೃಢೀಕರಿಸಿ ನಿಯಮಾನುಸಾರ ಮೂಲ ಕಡತವನ್ನು ಭೂಮಾಪನ ಶಾಖೆಗೆ ಕಳುಹಿಸಿದ ನಂತರ ಭೂಮಾಪನ ಶಾಖೆಯಲ್ಲಿ ಭೂಮಾಪಕರ ಲಭ್ಯತೆ ಅನುಗುಣವಾಗಿ ಅಳತೆ ಕೆಲಸ ನಿರ್ವಹಿಸಿ ಸುತ್ತೋಲೆ **ಸಂ.ತಾಂತ್ರಿಕ.ಆಡಳಿತ. ಸುತ್ತೋಲೆ. 29/ 2009-10 ದಿ:-25-1-2010** ರನ್ವಯ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ದುರಸ್ತಿ ಕ್ರಮ ಕೈಗೊಳ್ಳಲಾಗುತ್ತಿದೆ.<br>ಈ ರೀತಿಯಾಗಿ ನಮೂನೆ 6 ರಿಂದ 10 ಭರ್ತಿ ಮಾಡಿದ ಪ್ರಕರಣಗಳಲ್ಲಿ, ಮಂಜೂರಿ, ಹಕ್ಕು & ಅನುಭವಕ್ಕೆ ತಾಳೆ ಇರುವ ಅಥವಾ ಮಂಜೂರಿಗಿಂತ ಕಡಿಮೆ ಅನುಭವವಿರುವ ಪ್ರಕರಣಗಳಲ್ಲಿ ಮೂಲ ಮಂಜೂರಿ ದಾಖಲೆಗಳನ್ನು ಪರಿಶೀಲಿಸಿ ದುರಸ್ತಿ ಕ್ರಮ ಜರುಗಿಸಲಾಗುತ್ತದೆ. ಉಳಿದ ಪ್ರಕರಣಗಳಲ್ಲಿ ಮಂಜೂರಿ ಬಗ್ಗೆ ಪರಿಶೀಲಿಸಿ ಪರಿಷ್ಕರಿಸಿ ಆದೇಶ ನೀಡುವಂತೆ ಕೋರಿ ಮಂಜೂರಿ ಪ್ರಾಧಿಕಾರಕ್ಕೆ ಕಡತ ವರ್ಗಾಯಿಸಲಾಗುತ್ತದೆ<br>ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ **ಸಂ.ಆರ್.ಡಿ.74.ಎಲ್.ಜಿ.ಪಿ. 2009 ದಿ:17.09.2009** ಮತ್ತು **ಕಂಇ 08 ಎಲ್.ಜಿ.ಪಿ 2016 ದಿ: 20.06. 2016 & ದಿ:18-07-2016** ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆ ಯಲ್ಲಿರುವ ಗೈರುವಿಲೇ ಕಡತ ಪುನರ್ ನಿರ್ಮಾಣದ ಸಮಿತಿ ಯಲ್ಲಿ ಮಂಡಿಸಿ, ಸೂಕ್ತ ಆದೇಶವಾದ ನಂತರ ಕಡತ ಪುನರ್ ನಿರ್ಮಾಣ ಮಾಡಿಕೊಂಡು, ಪೋಡಿ ದುರಸ್ತಿ ಕ್ರಮ ವಹಿಸಲು ಸೂಚಿಸಿದ್ದು. ಅದರಂತೆ ಕ್ರಮ ವಹಿಸಲಾಗುತ್ತಿದೆ.<br>**ತತ್ಕಾಲ್ ಪೋಡಿ :-** ಸರ್ಕಾರದ ಅಧಿಸೂಚನೆ ಸಂ.ಸಿಆಸುಇ.2. ಎಸ್.ಎಸ್.ಎಂ-2020 ದಿನಾಂಕ :23-11-2020 ರನ್ವಯ ತತ್ಕಾಲ್ ಪೋಡಿ ಕೋರಿ ಸಲ್ಲಿಕೆಯಾಗುವ ಅರ್ಜಿಯಲ್ಲಿ ಯಾವುದೇ ಸಮಸ್ಯೆಗಳಿಲ್ಲದೆ ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣ ಗಳನ್ನು ಹಂಚಿಕೆಯಾದ ದಿನಾಂಕದಿಂದ 45 ದಿನಗಳಲ್ಲಿ ಇತ್ಯರ್ಥ ಪಡಿಸಲು ಕಾಲಮಿತಿ ನಿಗಧಿಪಡಿಸ ಲಾಗಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ<br>**ಬಾಕಿಯಿರುವ ದರಖಾಸ್ತು/ತತ್ಕಾಲ್ ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳು**<br>1. ರಾಜ್ಯದಲ್ಲಿ ಪ್ರತಿ ಮಾಹೆ ಸರಾಸರಿ 1.20 ಲಕ್ಷ ಅರ್ಜಿಗಳು ಸ್ವೀಕೃತವಾಗಿತ್ತಿದ್ದು ಆದರೆ ಸರಾಸರಿ 1.5 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಲಾಗುತ್ತಿದೆ. ಆದಾಗ್ಯೂ ಸುಮಾರು 2.0 ಲಕ್ಷ ಅರ್ಜಿಗಳು ಬಾಕಿ ಉಳಿದಿದ್ದು, ಸದರಿ ಅರ್ಜಿಗಳ ಶೀಘ್ರ ವಿಲೇ ಮಾಡುವ ಕುರಿತು ಸರ್ಕಾರದ ಸೂಚನೆಯಂತೆ 2022ನೇ ಸಾಲಿನಲ್ಲಿ 1,519 ಜನ ಪರವಾನಗಿ ಭೂಮಾಪಕರನ್ನು ಆಯ್ಕೆ ಮಾಡಿದ್ದು. ಪ್ರಸ್ತುತ 2023ನೇ ಸಾಲಿನಲ್ಲಿ 2,000 ಪರವಾನಗಿ ಭೂಮಾಪಕರ ನೇಮಕಾತಿಗಾಗಿ ಅಧಿ ಸೂಚನೆ ಹೊರಡಿಸಿ ಪ್ರವೇಶ ಪರೀಕ್ಷೆ ನಡಸಿ 1,405 ಜನ ಅರ್ಹ ಅಭ್ಯರ್ಥಿಗಳು ಆಯ್ಕೆ ಮಾಡಿ ತರಬೇತಿ ನೀಡಲಾಗು ತ್ತಿದೆ. ತರಬೇತಿ ನಂತರ ಅಂತಿಮ ಪರೀಕ್ಷೆ ಯಲ್ಲಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ |

| | | |
|---|---|---|
| | | ತಾಲ್ಲೂಕು ಗಳಿಗೆ ನಿಯೋಜಿಸಲಾಗುವುದು, ಅದರಂತೆ ಮಾಹೆ ಜನವರಿ 2024 ಕ್ಕೆ ಈ ಎಲ್ಲಾ ಭೂಮಾಪಕರು ಅಳತೆ ಗಾಗಿ ಲಭ್ಯ ವಾಗುತ್ತಾರೆ.<br>2. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>3. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ & ಅಗತ್ಯ ಸೂಚನೆ ನೀಡಲಾಗುತ್ತಿದೆ.<br>4. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಬಗ್ಗೆ ಕಂದಾಯ ಅದಾಲತ್ .ಗಳನ್ನು ನಡೆಸಲಾಗುತ್ತಿದೆ<br>5. ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸರ್ಕಾರದಿಂದ ಸೂಚಿಸಿದ್ದು, ಅದರಂತೆ ಕಂದಾಯ ಇಲಾಖೆ ಯಿಂದ ಕ್ರಮ ವಹಿಸಲಾಗುತ್ತಿದೆ.<br>6. ಪಹಣಿಯಲ್ಲಿನ ಮಾಲಿಕರ ಹೆಸರು/ಪೌತಿ ಖಾತೆ., ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂದ ಕಂದಾಯ ಇಲಾಖೆಯಿಂದ ಕಂದಾಯ ಅದಾಲತ್.ಗಳನ್ನು ನಡೆಸಲಾ ಗುತ್ತಿದೆ<br>7. ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳ ನ್ನು ನೀಡ ಲಾಗಿದೆ.<br>8. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್.ಲೈನ್. ನಲ್ಲಿ ಸ್ವೀಕರಿಸಲಾಗುತ್ತಿದ್ದು. ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO(ಸರದಿ ಸಾಲಿನಂತೆ) ಅಳವಡಿಸ ಲಾಗಿದೆ, ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ವಿತರಿಸಲಾಗುತ್ತಿದೆ. ಅಳತೆಯಾದ ನಂತರ ಭೂಮಾಪಕರು ಸರದಿ ಸಾಲಿನಂತೆ ಅಪ್‌ಲೋಡ್ ಮಾಡಲು ಹಾಗೂ ಕಡತಗಳ ಪರಿಶೀಲನೆ & ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್.ಲೈನ್.ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೆ ವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲ ದಂತೆ ಕ್ರಮವಹಿಸಲಾಗುತ್ತಿದೆ.<br><br>ಇದರಿಂದ ಬಾಕಿ ವಿವಿಧ ಪೋಡಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯ ವಾಗುತ್ತದೆ. |

<table>
<tr>
<td>ಈ</td>
<td>ಸದರಿ ಜಿಲ್ಲೆಗಳಲ್ಲಿರುವ ಗೋಮಾಳ ಭೂಮಿಯೆಷ್ಟು; ಅದರಲ್ಲಿ ಅತಿಕ್ರಮಣವಾಗಿದ್ದೆಷ್ಟು; ಇತರ ಉದ್ದೇಶಕ್ಕೆ ಬಳಸಿದ್ದೆಷ್ಟು; ಮತ್ತು ಅದಕ್ಕೆ ಅವಕಾಶವಿದೆಯೇ: ಪ್ರಸ್ತುತ ವಾಸ್ತವವಾಗಿ ಎಷ್ಟು ಜಾಗ ಉಳಿದಿದೆ? (ಸುತ್ತೋಲೆಗಳು ಮತ್ತು ಅಂಕಿ-ಅಂಶಗಳ ಸಹಿತ ವಿವರ ನೀಡುವುದು)</td>
<td>
<u>ದಕ್ಷಿಣ ಕನ್ನಡ ಜಿಲೆ</u>
ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಗೋಮಾಳ ಭೂಮಿ ವಿಸ್ತೀರ್ಣ:5628.3961 ಎಕರೆ ಆಗಿರುತ್ತದೆ. ಗೋಮಾಳಗಳ ಒತ್ತುವರಿ ವಿಸ್ತೀರ್ಣ:1264.4486 ಎಕರೆ ಆಗಿರುತ್ತದೆ. ಉಳಿಕೆ ವಿಸ್ತೀರ್ಣ 4363.9475ಎಕರೆ ಆಗಿರುತ್ತದೆ. ಗೋಮಾಳ ಜಮೀನನ್ನು ಇತರೆ ಉದ್ದೇಶಗಳಿಗೆ ಬಳಸುವ ಬಗ್ಗೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ.೦2.ಎಲ್.ಜಿ.ಪಿ.2021, ದಿನಾಂಕ:24-04-2022ರಂತೆ ಹಾಗೂ ಕರ್ನಾಟಕ ಭೂಮಂಜೂರಾತಿ ನಿಯಮಾವಳಿ 1966ರ ನಿಯಮ 97(4) ರಡಿ ಉಲ್ಲೇಖವಿರುತ್ತದೆ.
<u>ಉಡುಪಿ ಜಿಲ್ಲೆಯಲ್ಲಿ ಒಟ್ಟು ಗೋಮಾಳಗಳ ಸಂಖ್ಯೆ ವಿವರ</u>
<table>
<tr><th>ತಾಲ್ಲೂಕು</th><th>ಸರ್ವೆ ನಂಬರ್‌ಗಳ ಸಂಖ್ಯೆ</th><th>ವಿಸ್ತೀರ್ಣ (ಎ)</th></tr>
<tr><td>ಉಡುಪಿ</td><td>109</td><td>572.14</td></tr>
<tr><td>ಕಾಪು</td><td>45</td><td>314.87.50</td></tr>
<tr><td>ಕಾರ್ಕಳ</td><td>122</td><td>740.40</td></tr>
<tr><td>ಹೆಬ್ರಿ</td><td>54</td><td>106.82</td></tr>
<tr><td>ಬ್ರಹ್ಮಾವರ</td><td>60</td><td>443.68.75</td></tr>
<tr><td>ಕುಂದಾಪುರ</td><td>119</td><td>867.14</td></tr>
<tr><td>ಬೈಂದೂರು</td><td>35</td><td>112.90</td></tr>
<tr><td>ಒಟ್ಟು</td><td>544</td><td>3157.96.25</td></tr>
</table>
ಕಾಪು ತಾಲ್ಲೂಕಿನಲ್ಲಿ 5.08 ಎಕರೆ, ಕುಂದಾಪುರ ತಾಲ್ಲೂಕಿನಲ್ಲಿ 632.17.6 ಎಕರೆ, ಬ್ರಹ್ಮಾವರ ತಾಲ್ಲೂಕಿನಲ್ಲಿ 24.85 ಎಕರೆ ಒತ್ತುವರಿ ವಿಸ್ತೀರ್ಣ ಇರುತ್ತದೆ. (ಒತ್ತುವರಿಯಾದ ಗೋಮಾಳ ಜಮೀನುಗಳಿಗೆ ನಮೂನೆ 50, 53, 57, 94ಸಿ, 94ಸಿಸಿ ರಡಿಯಲ್ಲಿ ಅರ್ಜಿಗಳು ದಾಖಲಿರುತ್ತದೆ ಹಾಗೂ ಗೇರು ಪ್ಲಾಂಟೇಷನ್, ರಸ್ತೆ, ಅರಣ್ಯ ಇಲಾಖೆ ನೆಡು ತೋಪು, ಇತ್ಯಾದಿಯವರ ಸ್ವಾಧೀನತೆಯಲ್ಲಿರುವುದರಿಂದ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ) ಗೋಮಾಳ ಜಮೀನನ್ನು ಇತರೆ ಉದ್ದೇಶಗಳಿಗೆ ಬಳಸಲು ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ ೦2 ಎಲ್ ಜಿ ಪಿ 2021 ದಿನಾಂಕ:24-02-2022 ರಂತೆ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1996ರ ನಿಯಮ 97(4)ರಡಿ ಉಲ್ಲೇಖವಿರುತ್ತದೆ. ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.
</td>
</tr>
</table>

ಸಂಖ್ಯೆ: ಕಂಇ 120 ಸಮಿತಿ 2023

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

| ಪ್ರಾದೇಶಿಕ ಆಯುಕ್ತರು | ಜಿಲ್ಲೆ | ವರ್ಷ | ಜಿಲ್ಲಾ ಮಟ್ಟದಲ್ಲಿ ಸ್ವೀಕೃತ ಮನವಿಗಳಿಗೆ ಜಿಲ್ಲಾ ಮಟ್ಟದಲ್ಲಿ ಕ್ರಮವಹಿಸಲಾಗಿರುವ ಒಟ್ಟು ಮನವಿಗಳು | ಸರ್ಕಾರಕ್ಕೆ ಸಲ್ಲಿಸಿರುವ ಮನವಿಗಳು |
|---|---|---|---|---|
| ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಬೆಂಗಳೂರು | ಬೆಂಗಳೂರು ನಗರ | ಬೆಂಗಳೂರು ನಗರ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಸ್ವೀಕೃರಿಸಲಾಗುತ್ತಿರುವ ಸ್ಥಾನಿಕ ಸಮಸ್ಯೆಗಳ ಅಹವಾಲಗಳು ಪರಿಶೀಲಿಸಲಾಗುತ್ತಿದ ಹಾಗೂ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸಲು ತಿಂಗಳಿಗೊಮ್ಮೆ ತಾಲ್ಲೂಕು ಕಚೇರಿಗಳಲ್ಲಿ ಸಾರ್ವಜನಿಕ ಕುಂದುಕೊರತೆ ಸಭೆಗಳನ್ನು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕೃರಿಸಿ ಇತ್ಯರ್ಥ ಪಡಿಸಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ತ್ವರಿತವಾಗಿ ವಿಲೇವಾರಿ ಮಾಡಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.<br><br>2. ಸದರಿ ಮನವಿಗಳಲ್ಲಿ ಇರುವ ಅಂಶಗಳನ್ನು ಕ್ರೋಢಿಕರಿಸಿ ಅವಶ್ಯವಿದ್ದಲ್ಲಿ ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. | | |
| | **ಬೆಂಗಳೂರು (ಗ್ರಾಮಾಂತರ)** | **2021-22** | **98** | **52** |
| | | **2022-23** | **139** | **85** |
| | | **2023-24** | **55** | **37** |
| | **ರಾಮನಗರ** | **2020-21** | **712** | **25** |
| | | **2021-22** | **1444** | **24** |
| | | **2022-23** | **1196** | **30** |
| | **ಕೋಲಾರ** | **2020-21** | **1713** | **86** |
| | | **2021-22** | **5369** | **157** |
| | | **2022-23** | **370** | **168** |
| | **ಚಿಕ್ಕಬಳ್ಳಾಪುರ** | **2020-21** | **1175** | **125** |
| | | **2021-22** | **1380** | **48** |
| | | **2022-23** | **1425** | **76** |
| | **ತುಮಕೂರು** | **2021-22** | **4346** | - |
| | | **2022-23** | **16451** | - |
| | | **2023-24** | **1671 ದಿನಾಂಕ:29.11.2023ರ ಅಂತ್ಯಕ್ಕೆ** | - |
| | **ಚಿತ್ರದುರ್ಗ** | **2020-21** | **1342** | **400** |
| | | **2021-22** | **1258** | **324** |
| | | **2022-23** | **1180** | **260** |
| | **ದಾವಣಗೆರೆ** | **2020-21** | **1226** | **594** |
| | | **2021-22** | **1693** | **368** |
| | | **2022-23** | **2005** | **430** |
| | **ಶಿವಮೊಗ್ಗ** | **2020-21** | **1509** | **125** |
| | | **2021-22** | **1093** | **84** |
| | | **2022-23** | **2129** | **125** |

| | | | | |
|---|---|---|---|---|
| ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ | ಚಾಮರಾಜನಗರ | 2021-22 | 689 | 216 |
| | | 2022-23 | 1372 | 103 |
| | | 2023-24 | 768 | 87 |
| | ಹಾಸನ | 2021-22 | 817 | 36 |
| | | 2022-23 | 574 | 48 |
| | | 2023-24 | 997 | 21 |
| | ಕೊಡಗು | 2021-22 | 560 | 03 |
| | | 2022-23 | 756 | 01 |
| | | 2023-24 | 346 | 00 |
| | ಚಿಕ್ಕಮಗಳೂರು | 2021-22 | 1304 | 212 |
| | | 2022-23 | 1455 | 120 |
| | | 2023-24 | 659 | 114 |
| | ದ.ಕನ್ನಡ | ಕಂದಾಯ ಇಲಾಖೆಯ ಸ್ಥಾನಿ ಸಮಸ್ಯೆಗಳ ಕುರಿತಂತೆ ದ.ಕನ್ನಡ ಜಿಲ್ಲ ಜಿಲ್ಲೆಯಲ್ಲಿ ಜನತಾ ದರ್ಶನ ಮೂಲಕ ಸಾರ್ವಜನಿಕ ಕುಂದುಕೊರತೆ ಆಲಿಕೆ ಹಾಗೂ ಸಾರ್ವಜನಿಕರಿಂದ ಮನವಿ ಸ್ವೀಕೃರಿಸಲಾಗಿರುತ್ತದೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಕ್ರಮವಹಿಸಲಾಗಿದೆ. | | |
| | ಮಂಡ್ಯ | 2021-22 | 3422 | 41 |
| | | 2022-23 | 8057 | 33 |
| | | 2023-24 | 587 | 144 |
| | ಮೈಸೂರು | 2021-22 | 4048 | 76 |
| | | 2022-23 | 3248 | 48 |
| | | 2023-24 | 433 | 417 |
| | ಉಡುಪಿ | ಸ್ಥಾನಿಕ ಸಮಸ್ಯಗಳ ಕುರಿತಂತೆ ಸರ್ಕಾರದ ನಿರ್ದೇಶನದಂತೆ ಉಡುಪಿ ಜಿಲ್ಲೆಯಲ್ಲಿ 15 ದಿನಕ್ಕೊಮ್ಮೆ ಜನತಾ ದರ್ಶನ ಕಾರ್ಯಕ್ರಮ ಆಯೋಜಿಸಿ ಸಾರ್ವಜನಿಕ ಕುಂದುಕೊರತೆ ಆಲಿಕೆ ಹಾಗೂ ಸಾರ್ವಜನಿಕರಿಂದ ಮನವಿ ಸ್ವೀಕೃರಿಸಲಾಗಿರುತ್ತದೆ ಜಿಲ್ಲಾಧಿಕಾರಿಗಳ ಹಂತದಲ್ಲಿ ಕ್ರಮವಹಿಸಲಾಗಿದೆ. ಈ ಪೈಕಿ ಮೂಲ ಗೇಣಿ, ಕುಮ್ಕಿ, ಡೀಮ್ಡ್ ಫಾರೆಸ್ಟ್ ಸಮಸ್ಯೆಗಳ ಬಗ್ಗೆ ಮನವಿಗಳು ಸ್ವೀಕೃತವಾಗಿದ್ದು ಅವುಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. | | |
| ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ | ಬೀದರ | ಸ್ಥಾನಿಕ ಸಮಸ್ಯೆಗಳ ಕುರಿತು ಸಾರ್ವಜನಿಕರು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಲಾಗಿದೆ. | | |
| | ಬಳ್ಳಾರಿ | ಬಳ್ಳಾರಿ ಜಿಲ್ಲೆಯಲ್ಲಿ ಈವರೆಗೂ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸ್ವೀಕೃತಗೊಂಡ<br>1. IPGRS-583<br>2. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು-2212 | | |
| | ಕಲಬುರಗಿ | 1. IPGRS-863<br>2. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು-1999 | | |
| | ಕೊಪ್ಪಳ | ಒಟ್ಟು ಪ್ರಕರಣಗಳು-2246<br>ವಿಲೇವಾರಿ ಮಾಡಿದ ಪ್ರಕರಣಗಳು-2198<br>ಬಾಕಿ ಇರುವ ಪ್ರಕರಣಗಳು-48 | | |
| | ರಾಯಚೂರು | 1. IPGRS-540<br>2. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು-880 | | |
| | ಯಾದಗಿರಿ | 1. IPGRS-535<br>2. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು-2895 | | |
| | ವಿಜಯನಗರ ಜಿಲ್ಲೆ | 1. IPGRS-1261<br>2. ಸಾರ್ವಜನಿಕರಿಂದ ಸ್ವೀಕೃತವಾದ ಅರ್ಜಿಗಳು-485 | | |